ಶ್ರೀ ಡಿ.ವಿ.ಸದಾನಂದಗೌಡ: ವಕ್ಫ್ ಆಸ್ತಿಯ ಹಣವು ದುರುಪಯೋಗವಾಗುತ್ತಿರುವ ಬಗ್ಗೆ ಎಲ್ಲಾ ಕಡೆ ಕೇಳಿಬರುತ್ತಿದೆ. ಈ ಅವ್ಯವಹಾರದ ಬಗ್ಗೆ ತನಿಖೆ ಮಾಡಲು ಹಿಂದೆ ಬಷೀರ್ ಹುಸೇನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿದ್ದು ನಿಜವೆ? ಅವರು ವರದಿಯನ್ನು ಕೊಟ್ಟಿದ್ದಾರೆಯೇ? ನಮಗೆ ತಿಳಿದಮಟ್ಟಿಗೆ ಹಲವಾರು ಆಸಕ್ತ ವ್ಯಕ್ತಿಗಳ ವಿರುದ್ಧ ಅವರು ವರದಿಯನ್ನು ಕೊಟ್ಟಿದ್ದರು. ಆದರೆ ಆ ವರದಿಯನ್ನು ಅಂಗೀಕರಿಸಲಿಲ್ಲ. ಬದಲಾಗಿ ನಿವೃತ್ತ ನ್ಯಾಯಾಧೀಶರಾದ ನಿಸ್ಸಾರ್‌ಅಹಮದ್‌ರವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ರಚನೆ ಮಾಡಿದಿರಿ, ಇದಕ್ಕೆ ಕಾರಣವೇನು? ಹಿಂದಿನ ವರದಿಯನ್ನು ಅಂಗೀಕರಿಸದಿರಲು ಕಾರಣವೇನು? ನಿಸ್ಸಾರ್ ಅಹಮದ್‌ರವರು ವರದಿ ಕೊಟ್ಟಿದ್ದರೂ ಕ್ರಮ ತೆಗೆದಕೊಳ್ಳದಿರಲು ಕಾರಣವೇನು?

ಶ್ರೀ ಎ.ಎಂ.ಹಿಂಡಸಗೇರಿ: ಬಷೀರ್ ಹುಸೇನ್ ಮತ್ತು ನಿಸ್ಸಾರ್ ಅಹಮದ್‌ರವರು ವರದಿಯನ್ನು ಸಲ್ಲಿಸಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರು ಬೇರೊಂದು ಪ್ರಶ್ನೆ ಕೇಳಿದರೆ ಸವಿಸ್ತಾರವಾಗಿ ಉತ್ತರವನ್ನು ನೀಡಲು ಸಹಾಯವಾಗುತ್ತದೆ.

ಧಾರವಾಡ ನಗರದ ಲೋಕೋಪಯೋಗಿ ಇಲಾಖೆಯ ರಸ್ತೆಗಳು.

180 (೨೧೦೬)

ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಧಾರವಾಡ ನಗರದ ಲೋಕೋಪಯೋಗಿ ಇಲಾಖೆಯ ರಸ್ತೆಗಳ ವಿವರ ಹಾಗೂ ಕಿಮೀ.ನ ಉದ್ದ ಅಗಲ ತಿಳಿಸುವುದು;

2. ಈ ನಗರದ ಜಿಲ್ಲಾ ಕೇಂದ್ರವು ಮೂರು ವಿಶ್ವವಿದ್ಯಾಲಯ, ಆಕಾಶವಾಣಿ-ದೂರವಾಣಿ ಮುಂತಾದ ಸೌಲಭ್ಯಗಳಿಂದ ಮುನ್ನಡೆಯುತ್ತಿದ್ದು ನಗರದ ಸದರೀ ರಸ್ತೆಗಳ ವಿಸ್ತಾರ (ಅಗಲ) ಹೆಚ್ಚಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಧಾರವಾಡ ನಗರದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ವಿವರ ಹಾಗೂ ಕಿಮೀ.ನ ಉದ್ದ ಅಗಲದ ವಿವರಗಳನ್ನು ಕೆಳಗಿನಂತೆ ನೀಡಿದೆ.

ಕ್ರಮ ಸಂಖ್ಯೆ	ರಸ್ತೆಗಳ ಹೆಸರು	ಉದ್ದ ಕಿಮಿ	ಅಗಲ ಡಾಂಬರೀಕರಣ ೩.೭೫ ಮಿ. ಅಗಲ	೫.೫. ಮಿ. ಅಗಲ	೭.೫ ಮಿ ಅಗಲ
ರಾಷ್ಟ್ರೀಯ ಹೆದ್ದಾರಿ - ೪		೧೩.೦೦	-	-	೧೩.೦೦
ರಾಜ್ಯ ಹೆದ್ದಾರಿಗಳು					
೧	ಧಾರವಾಡ ಅನಮೋಡ ರಾಹೆ- ೩೪	೮.೦೦	-	೫.೦೦	೩.೦೦
೨	ಬಿಜಾಪುರ ಧಾರವಾಡ ರಾಹೆ-೬೫	೩.೧೦	-	-	೩.೧೦
೩	ಸೂಪಾ ಹಳಿಯಾಳ ಧಾರವಾಡ ಹೆಬಸೂರ ರಸ್ತೆ ರಾಹೆ-೨೮	೧೧.೯೮	-	೬.೯೮	೫.೦೦
	ಜಿಲ್ಲಾ ಮುಖ್ಯ ರಸ್ತೆ-				
೧	ಧಾರವಾಡ ರೈಲ್ವೆ ಸ್ಟೇಷನ್ ರಸ್ತೆ	೧.೩೦	-	-	೧.೩೦
೨	ಓಲ್ಡ್ ಕಂಟೋನ್ಮೆಂಟ್ ರಸ್ತೆ	೪.೨೦	೪.೨೦	-	-
೩	ಲಿಂಕ್ ರೋಡ್ ಜಾಯ್‌ನಿಂಗ್ ಪಿ.ಬಿ. ರೋಡ್ ಧಾರವಾಡ ಹಳ್ಯಾಳ ರೋಡ	೨.೦೦	-	೨.೦೦	-
೪	ಲಿಂಕ್ ರೋಡ್ ಜಾಯ್‌ನಿಂಗ್ ಸಪ್ತಾಪೂರ ಟು ಚಕ್ಕಗಟ್ಟಾ	೦.೪೦	-	-	೦.೪೦
೫	ಧಾರವಾಡ ಕಲಘಟಗಿ ರಸ್ತೆ	೨.೦೦	-	-	೨.೦೦
೬	ಜಿಲ್ಲಾಧಿಕಾರಿಗಳ ಕಚೇರಿ ಮು.ಇಂ. ಕಚೇರಿ ಹಾಗೂ ಇತರೆ ಸರ್ಕಾರಿ ಕಚೇರಿಗಳಿಗೆ ಸಂಪರ್ಕ ರಸ್ತೆ	೨.೬೨	-	೨.೬೨	-
	ಒಟ್ಟು	೪೮.೬೦			

2. ಸದರಿ ರಸ್ತೆಗಳ ಒಟ್ಟು ಉದ್ದ ೪೮.೬೦ ಕಿಮೀ. ಇದೆ. ಇವೆಲ್ಲ ರಸ್ತೆಗಳು ಧಾರವಾಡ ನಗರದಲ್ಲಿಯೇ ಬರುತ್ತವೆ ರಸ್ತೆಗಳ ವಿಸ್ತಾರ (ಅಗಲ) ಹೆಚ್ಚಿಸಲು ಸಧ್ಯ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ: ಮಾನ್ಯ ಅಧ್ಯಕ್ಷರೆ, ಮೊನ್ನೆ ಮಾನ್ಯ ಸಚಿವರು ಧಾರವಾಡಕ್ಕೆ ಬಂದಿದ್ದಾಗ ಧಾರವಾಡದಲ್ಲಿರುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ತೋರಿಸಿದ್ದೇನೆ. ನಗರದಲ್ಲಿ ಬರುವ ಈ ರಸ್ತೆಗಳು ಬಹಳ ಕೆಟ್ಟುಹೋಗಿದೆ, ಅದನ್ನು ವಿಸ್ತರಿಸಿ ಸರಿಪಡಿಸಿಕೊಡಬೇಕೆಂದು ಮನವಿ ಸಲ್ಲಿಸಿದ್ದೇನೆ. ಮೂರು ವರ್ಷದ ನಿರ್ವಹಣೆ ಮೇಲೆ ರಸ್ತೆಗಳನ್ನೇನು ಗುತ್ತಿಗೆ ಕೊಡುತ್ತಿದ್ದಾರೆ ಅದಕ್ಕೆ ಕೊಡುವಂಥ ಹಣದಲ್ಲೇ ನಮ್ಮಲ್ಲಿ ಕಾಂಕ್ರಿಟ್ ರಸ್ತೆಗಳನ್ನು ಮಾಡಬಹುದು. ಆ ರೀತಿ ಮಾಡಿದರೆ ಶಾಶ್ವತವಾಗಿ ಕನಿಷ್ಟ ಐವತ್ತು ವರ್ಷಗಳವರೆಗೆ ರಸ್ತೆಗಳು ಉಳಿಯುತ್ತದೆ. ಊರಿನ ಮಧ್ಯದಲ್ಲಿರುವ ರಸ್ತೆಗಳನ್ನು ಕಾಂಕ್ರಿಟ್ ರಸ್ತೆಗಳನ್ನಾಗಿ ಮಾಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಧಾರವಾಡ ಹುಬ್ಬಳ್ಳಿ ನಡುವೆ ಏನು ಮೊದಲಿನ ರಾಷ್ಟ್ರೀಯ ಹೆದ್ದಾರಿ ಇದೆ ಅದನ್ನು ಜೋಡಿ ರಸ್ತೆಯನ್ನಾಗಿ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಂಡಿದ್ದೇನೆ. ಇದು ಸಹ ಹುಬ್ಬಳ್ಳಿ ಧಾರವಾಡದ ನಡುವೆ ಇರುವ ಪ್ರಮುಖವಾದ ರಸ್ತೆ. ಬೆಂಗಳೂರಿನ ನಂತರ ಎರಡನೆ ರಾಜಧಾನಿ ಧಾರವಾಡ ಎಂದು ಕರೆಯಲಾಗುತ್ತದೆ. ಅಲ್ಲಿ ವಾಹನಗಳ ದಟ್ಟಣೆ ಬಹಳ ಹೆಚ್ಚಾಗಿದೆ. ಎಲ್ಲರೂ ಬೆಂಗಳೂರು ರಸ್ತೆಯ ಬಗ್ಗೆ ಹೆಚ್ಚು ಲಕ್ಷ್ಯವನ್ನು ಕೊಡುತ್ತಾರೆ. ಧಾರವಾಡ-ಹುಬ್ಬಳ್ಳಿ ಎರಡನೆಯ ರಾಜಧಾನಿ, ಸಾಂಸ್ಕೃತಿಕ ನಗರ, ಇಲ್ಲಿಯ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ್ದು, ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳನ್ನು ಸರಿಯಾದ ರೀತಿಯಲ್ಲಿ ಕೆಲಸ ಮಾಡಿ ಉತ್ತಮವಾದ ರಸ್ತೆಗಳನ್ನು ಮಾಡಿಕೊಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಬರುವ ಮೊದಲು ಮೊನ್ನೆ ನಾನು ಧಾರವಾಡಹುಬ್ಬಳ್ಳಿಗೆ ಹೋಗಿದ್ದೆ, ಮಾನ್ಯ ಚಂದ್ರಕಾಂತ ಬೆಲ್ಲದ್ ಮತ್ತು ಹಿಂಡಸಗೇರಿಯವರೊಂದಿಗೆ ಅಲ್ಲಿರುವ ಪಿ.ಡಬ್ಲ್ಯೂ.ಡಿ ರಸ್ತೆಗಳನ್ನು ನೋಡಿ ಬಂದಿದ್ದೇನೆ. ಅದರಲ್ಲಿ ಎರಡು ಕಿಲೋಮೀಟರ್ ರಸ್ತೆಯ ರೀಸರ್ಫೇಸಿಂಗ್ ಕೆಲಸವನ್ನು ತೆಗೆದುಕೊಂಡಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಮಳೆ ನಿಂತ ಮೇಲೆ ಅಕ್ಟೋಬರ್‌ನಲ್ಲಿ ಉಳಿದ ರಸ್ತೆಯ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬರುವಾಗ ಏನು ೧೪ ಹಳ್ಳಗಳು ಬರುತ್ತವೆ ಅದರ ರಸ್ತೆಯನ್ನು ಅಗಲ ಮಾಡುವ ಕಾರ್ಯಕ್ರಮವಿದೆ. ಈಗಾಗಲೆ ಹುಬ್ಬಳ್ಳಿ-ಧಾರವಾಡದ ನಡುವೆ ಬೈಪಾಸ್ ರಸ್ತೆಯ ಕೆಲಸವನ್ನು ಮಾಡಿದ್ದೇವೆ. ಬಹಳ ಒಳ್ಳೆಯ

ಕೆಲಸವಾಗಿರುವುದರಲ್ಲಿ ಮೊದಲನೆಯದು ಆ ಕೆಲಸವಾಗಿದೆ. ಅದಕ್ಕೆ ಜನರು ಸಹ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ತುಮಕೂರಿನಿಂದ ಪೂನಾಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ ನಾಲ್ಕು ಏನಿದೆ, ಅದರಲ್ಲಿ ೫೨೫ ಕಿಲೋ ಮೀಟರ್ ಬೆಂಗಳೂರಿನಿಂದ ಬೆಳಗಾಂವರೆಗೆ ರಸ್ತೆ ಅಗಲ ಮಾಡುವ ಕೆಲಸ, ನಾಲ್ಕು ರಸ್ತೆಗಳನ್ನು ಮಾಡುವ ಕೆಲಸ ಕಾರ್ಯಪ್ರವೃತ್ತಿಯಲ್ಲಿದೆ. ಇದರಲ್ಲಿ ಹುಬ್ಬಳ್ಳಿ ಧಾರವಾಡಗಳು ಸಹ ಕವರ್ ಆಗುತ್ತವೆ. ಹುಬ್ಬಳ್ಳಿ ಧಾರವಾಡದಲ್ಲೇನು ರಾಜ್ಯ ಹೆದ್ದಾರಿ ಬರುತ್ತದೆ ಅದರ ಅಭಿವೃದ್ಧಿ ಮಾಡಲು ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ತಾವು ಸಿಮೆಂಟ್ ರಸ್ತೆ ಮಾಡಲು ಏನಂತಿ ಮಾಡಿದ್ದೀರಿ. ಇಡೀ ದೇಶದಲ್ಲಿ ಸಿಮೆಂಟ್ ರಸ್ತೆಯನ್ನು ಮಾಡಿದ್ದು ಬೆಂಗಳೂರು ನಗರಪಾಲಿಕೆ ಮಾತ್ರ. ಬೆಂಗಳೂರು ನಗರ ಪಾಲಿಕೆಯ ಬಜೆಟ್ ಇತರೆ ಮಹಾ ನಗರ ಪಾಲಿಕೆಗಳ ಬಜೆಟ್ ಬೇರೆ ಬೇರೆ. ಸಿಮೆಂಟ್ ರಸ್ತೆಗಳನ್ನು ಮಾಡಲು ಬಹಳ ವೆಚ್ಚದಾಯಕವಾಗುತ್ತದೆ. ಆದ್ದರಿಂದ ಇದನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಬೇರೆ ರೀತಿಯಲ್ಲಿ ರಸ್ತೆಗಳ ದುರಸ್ತಿ ಮಾಡುವ ಬಗ್ಗೆ ಸರ್ಕಾರದಿಂದ ಆದೇಶ ಕೊಡುತ್ತೇವೆ. ಬೆಂಗಳೂರಿನ ನಂತರ ಹುಬ್ಬಳ್ಳಿ ಧಾರವಾಡ ನಗರಗಳು ಪ್ರಮುಖವಾದ ಪಟ್ಟಣವಾಗಿವೆ. ಅದರ ಬಗ್ಗೆ ಸಾಕಷ್ಟು ನಿಗಾವನ್ನು ವಹಿಸುತ್ತೇವೆ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ: ರಾಜ್ಯ ಹೆದ್ದಾರಿಗಳಿಗೇನು ಮೂರು ವರ್ಷದ ಉಸ್ತುವಾರಿ ಸಹಿತ ಗುತ್ತಿಗೆ ಕೊಟ್ಟಿದ್ದೀರಿ ಅದೇ ವೆಚ್ಚದಲ್ಲಿ ನಮ್ಮಲ್ಲಿ ಸಿಮೆಂಟ್ ರಸ್ತೆಗಳನ್ನು ಮಾಡಬಹುದು. ಇದರ ಬಗ್ಗೆ ನಾನು ಅಂದಾಜನ್ನೂ ಮಾಡಿಸಿದ್ದೇನೆ. ಅವರು ಮೂರು ವರ್ಷ ಉಸ್ತುವಾರಿ ನೋಡುವರು. ಆದರೆ ಸಿಮೆಂಟ್ ರಸ್ತೆಗಳು ಐವತ್ತು ವರ್ಷ ಬರುತ್ತವೆ. ಈಗಾಗಲೆ ದಾವಣಗೆರೆ, ಶಿವಮೊಗ್ಗ, ಗದಗ್‌ನಲ್ಲಿ ಸಿಮೆಂಟ್ ರಸ್ತೆಗಳನ್ನು ಮಾಡಿದ್ದಾರೆ. ನಗರದಲ್ಲಿ ಸಿಮೆಂಟ್ ರಸ್ತೆಗಳನ್ನು ಮಾಡಿಬಿಟ್ಟರೆ ಶಾಶ್ವತವಾದ ರಸ್ತೆಗಳು ಆಗುತ್ತವೆ. ಬೆಂಗಳೂರಿನ ನಂತರ ಧಾರವಾಡ ಪ್ರಮುಖವಾದ ಪಟ್ಟಣ, ಇಲ್ಲಿ ಸಿಮೆಂಟ್ ರಸ್ತೆಗಳನ್ನು ಮಾಡಿದರೆ ಸರ್ಕಾರ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ. ಆ ಕೆಲಸವನ್ನು ಮಾಡಬೇಕಾಗಿ ಮಾನ್ಯ ಸಚಿವರಲ್ಲಿ, ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿನ ನಗರ ಪಾಲಿಕೆಯಲ್ಲಿ ಹಣವಿಲ್ಲ, ನಗರದಲ್ಲಿರುವ ಪಿ.ಡಬ್ಲ್ಯೂ.ಡಿ. ರಸ್ತೆಗಳನ್ನು ಸರಿಮಾಡಿಬಿಟ್ಟರೆ ಎಷ್ಟೋ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ನಾನು ಇದರ ಬಗ್ಗೆ ಮುಖ್ಯ ಅಭಿಯಂತರರು ಮತ್ತು ಇತರೆ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿದ್ದೇನೆ, ಇದಕ್ಕೆ ಹೆಚ್ಚು ವೆಚ್ಚವಾಗುತ್ತದೆಂದು ಹೇಳಿದ್ದಾರೆ. ರಾಜ್ಯ ಹೆದ್ದಾರಿಗಳನ್ನು ಮಾಡುವಾಗ ಒಂದು ಕಿಲೋ ಮೀಟರ್‌ಗೆ 10 ರಿಂದ 12 ಲಕ್ಷ ಖರ್ಚು ಮಾಡುತ್ತೇವೆ. ಆ ಹಣದಲ್ಲಿ ಸಿಮೆಂಟ್ ರಸ್ತೆಯನ್ನು ಮಾಡಲು ಆಗುವುದಿಲ್ಲ. ಹಲವಾರು ಕಡೆಗಳಲ್ಲಿ ನಗರ

ಪಾಲಿಕೆಯವರು ಸಿಮೆಂಟ್ ರಸ್ತೆಗಳನ್ನು ಮಾಡಿದ್ದಾರೆ. ನಗರ ಪಾಲಿಕೆಗಳ ಮೇಲೆ ಸಹ ಜವಾಬ್ದಾರಿ ಇರುತ್ತದೆ. ಮೊನ್ನೆ ಮಂಗಳೂರಿಗೆ ಹೋಗಿದ್ದೆ, ಅಲ್ಲಿ ಎರಡು ಕೋಟಿ ಇಪ್ಪತ್ತೆಂಟು ಲಕ್ಷ ರೂ.ಗಳ ವೆಚ್ಚದಲ್ಲಿ ನಗರಪಾಲಿಕೆಯವರೇ ಸಿಮೆಂಟ್ ರಸ್ತೆಗಳನ್ನು ಮಾಡಿದ್ದಾರೆ. ನಗರ ಪಾಲಿಕೆಯವರೇನು ತೆರಿಗೆಯನ್ನು ವಸೂಲಿ ಮಾಡುತ್ತಾರೆ ಅದರಲ್ಲಿ ಈ ಕೆಲಸವನ್ನು ಮಾಡಿಕೊಳ್ಳಬೇಕು. ಆದರೂ ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್.ಯೋಗೇಶ್ ಭಟ್: ಮಂಗಳೂರಿನಲ್ಲಿ ಮಹಾನಗರಪಾಲಿಕೆ ಮತ್ತು ಮೂಡಾದ ಕಡೆಯಿಂದ ಪಿ.ಡಬ್ಲ್ಯೂ.ಡಿ. ರಸ್ತೆಯನ್ನು ಆ ರೀತಿ ಮಾಡಿದ್ದು. ಮಹಾನಗರಪಾಲಿಕೆಯ ರಸ್ತೆಯನ್ನು ಮಾಡಿದ್ದಲ್ಲ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆರ್ಥಿಕ ಪರಿಸ್ಥಿತಿ ಯಾವ ರೀತಿ ಇದೆಯೆಂದು ಎಲ್ಲರಿಗೂ ಗೊತ್ತು. ಅಲ್ಲಿನ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ನಾವು ಕೇಳುತ್ತಿರುವುದು ನಗರಪಾಲಿಕೆಯ ರಸ್ತೆಗಳಿಗಲ್ಲ, ಪಿ.ಡಬ್ಲ್ಯೂ.ಡಿ. ರಸ್ತೆಗಳಿಗೇನು ತಾವು ವೆಚ್ಚ ಮಾಡುತ್ತಿದ್ದೀರಿ ಅದೇ ಹಣವನ್ನು ಕಾಂಕ್ರಿಟ್ ರಸ್ತೆ ಮಾಡಲು ಉಪಯೋಗಿಸಿದರೆ ಶಾಶ್ವತವಾದ ಪರಿಹಾರ ಸಿಗುತ್ತದೆ. ಅದಕ್ಕೆ ಅಂದಾಜು ಮಾಡಿಕೊಟ್ಟಿದ್ದೇನೆ. ತಾವು ಮಾಡುವ ರಸ್ತೆಗಳ ಕಾಂಕ್ರಿಟ್‌ನದ್ದಾದರೆ ಕನಿಷ್ಟ ಐವತ್ತು ವರ್ಷಗಳ ಕಾಲ ಇರುತ್ತದೆ.

ಶ್ರೀ ಧರ್ಮಸಿಂಗ್: ಇದರ ಬಗ್ಗೆ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಆಗುವುದಿದ್ದರೆ ಮಾಡಿಕೊಡುತ್ತೇನೆ.